ಹಡಗಲಿ ತಾಲ್ಲೂಕು	8	5	3
ಹಗರಿಬೊಮ್ಮನಹಳ್ಳಿ ತಾಲ್ಲೂಕು	8	5	3
ಕೂಡ್ಲಿಗಿ ತಾಲ್ಲೂಕು	11	8	3
ಒಟ್ಟು	70	52	18
ಗುಲ್ಬರ್ಗಾ ವಿಭಾಗದ ಒಟ್ಟು	340	253	87
ಕಂದಾಯ ಇಲಾಖೆಯ ಒಟ್ಟಾರೆ	**2163**	**1619**	**544**

ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳು

(246) 364

ಶ್ರೀ ನರೇಂದ್ರಬಾಬು ನೆ.ಲ (ಮಹಾಲಕ್ಷ್ಮಿ ಲೇಔಟ್)

ಅ) ಸರ್ಕಾರವು ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳೇನು? (ವಿವರ ನೀಡುವುದು)

ಆ) ಇಲಾಖಾ ವತಿಯಿಂದ ಅಲ್ಪಸಂಖ್ಯಾತರ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಸತಿ ಸೌಕರ್ಯ ಕಲ್ಪಿಸಿದೆಯೇ?

ಇ) ಇಲಾಖೆಯು ಅಲ್ಪಸಂಖ್ಯಾತರ ಪ್ರಿ ಮೆಟ್ರಿಕ್/ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗಿದೆಯೇ?

ಈ) ಹಾಗಿದ್ದಲ್ಲಿ, ನೀಡುತ್ತಿರುವ ವೇತನದ ಪ್ರಮಾಣವೆಷ್ಟು? (ಪ್ರಿ ಮೆಟ್ರಿಕ್/ಪೋಸ್ಟ್ ಮೆಟ್ರಿಕ್‌ವಾರು ವಿವರ ನೀಡುವುದು)

ಶ್ರೀ ಜಗದೀಶ್ ಶೆಟ್ಟರ್ ಮುಖ್ಯಮಂತ್ರಿ

ಅ) ಅಲ್ಪಸಂಖ್ಯಾತರ ಇಲಾಖೆಯಿಂದ ಸರ್ಕಾರವು ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳ ವಿವರ ಈ ಕೆಳಕಂಡಂತಿವೆ.

1	ಕ್ರೈಸ್ತರ ಅಭಿವೃದ್ಧಿ ಯೋಜನೆ – ವಿದ್ಯಾರ್ಥಿಗಳಿಗೆ ಉತ್ತೇಜನ
2	ಸರ್ಕಾರಿ ಅಲ್ಪಸಂಖ್ಯಾತರ ಶಾಲೆಗಳಿಗೆ ಶಿಕ್ಷಣ ಮತ್ತು ಕಲಿಕೆ ಸಾಧನಗಳು
3	ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉತ್ತೇಜನ
4	ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಹಾಗೂ ವಸತಿ ಶಾಲೆಗಳ ನಿರ್ವಹಣೆ
5	ಅಲ್ಪಸಂಖ್ಯಾತರಿಗಾಗಿ ನೂತನ ಹಾಸ್ಟೆಲ್‌ಗಳ ಪ್ರಾರಂಭ
6	ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ

7	ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ
8	ಅಲ್ಪಸಂಖ್ಯಾತರ ಐಟಿಐ/ಡಿಪ್ಲೋಮ ವಿದ್ಯಾರ್ಥಿಗಳಿಗೆ ಶಿಷ್ಯವೇತನ
9	ಅಲ್ಪಸಂಖ್ಯಾತರಿಗಾಗಿ ಹಾಸ್ಟೆಲ್‌ಗಳು (ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಹಾಸ್ಟೆಲ್‌ಗಳು)
10	ವೃತ್ತಿ ಮತ್ತು ತಾಂತ್ರಿಕ ಕೋರ್ಸಗಳಿಗೆ ಅರ್ಹತೆ ಕಂ ಸಾಧನೆ ಆಧಾರಿತ ವಿದ್ಯಾರ್ಥಿವೇತನ
11	ಅಲ್ಪಸಂಖ್ಯಾತರಿಗಾಗಿ ಮೆಟ್ರಿಕ್ ಪೂರ್ವ ಹಾಗೂ (ಮೆಟ್ರಿಕ್ ನಂತರದ) ವಿದ್ಯಾರ್ಥಿವೇತನ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಅರಿವು (ವಿದ್ಯಾಭ್ಯಾಸ) ಸಾಲ ಯೋಜನೆಯನ್ನು ಹಮ್ಮಿಕೊಂಡಿರುತ್ತದೆ. ಈ ಯೋಜನೆಯಡಿಯಲ್ಲಿ ವೃತ್ತಿಪರ ವಿದ್ಯಾಭ್ಯಾಸಕ್ಕಾಗಿ ಅಂದರೆ ಎಂ.ಬಿ.ಬಿ.ಎಸ್. ಇಂಜಿನಿಯರಿಂಗ್ ಹಾಗೂ ಬಿಡಿಎಸ್ ಅಭ್ಯರ್ಥಿಗಳಿಗೆ ಹಾಗೂ ಇನ್ನಿತರ ವ್ಯಾಸಂಗಗಳಿಗೆ (ಅಂದರೆ ಬಿಸಿಎ, ಎಂಸಿಎ, ಬಿಎಸ್, ಟಿಸಿಹೆಚ್, ನರ್ಸಿಂಗ್), ನಿಗಮದಿಂದ ವಾರ್ಷಿಕವಾಗಿ ಕನಿಷ್ಠ ರೂ.05,000/–ಗಳಿಂದ ಗರಿಷ್ಠ ರೂ.50,000/–ಗಳಂತೆ ಸಾಲ ಸೌಲಭ್ಯವನ್ನು ಕಲ್ಪಿಸುವ ಉದ್ದೇಶದಿಂದ ಈ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಅಭ್ಯರ್ಥಿಗಳು ತಮ್ಮ ವಿದ್ಯಾಭ್ಯಾಸ ಮುಗಿಸಿದ ಒಂದು ವರ್ಷದ ನಂತರ (ಯಾವುದು ಮೊದಲೋ ಅದು) ನಿಗಮದಿಂದ ಪಡೆದ ಸಾಲವನ್ನು ಶೇ.2ರ ಬಡ್ಡಿ ದರದಲ್ಲಿ ಮರುಪಾವತಿ ಮಾಡಬೇಕಾಗಿರುತ್ತದೆ.

ಆ) ಹೌದು

ಇ) ಹೌದು (ಕೇಂದ್ರ ಸರ್ಕಾರದಿಂದ ವಿದ್ಯಾರ್ಥಿವೇತನ ನೀಡಲಾಗುತ್ತಿದೆ.)

ಈ) 1. ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ – ಕೇಂದ್ರ ಪಾಲು 75% ರಾಜ್ಯದ ಪಾಲು 25% ನೀಡುತ್ತಿರುವ ದರ ರೂ.1000–5000

2. ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ – ಕೇಂದ್ರದ ಪಾಲು 100% ನೀಡುತ್ತಿರುವ ದರ ರೂ. 2500–12300